All India Radio: Bangalore
National Bulletin In Kannada
08.10.2025 : 13.10hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

08.10.2025 : 13.10hrs

*************

**ಮುಖ್ಯಾಂಶಗಳು :**

1. ಇಂಡಿಯಾ ೬-ಜಿ ದೃಷ್ಟಿಕೋನ ಸಾಧಿಸುವಲ್ಲಿ ಭಾರತದಲ್ಲೇ ನಿರ್ಮಿತ ೪-ಜಿ ಸ್ಟ್ಯಾಕ್ ತಂತ್ರಜ್ಞಾನ ಪ್ರಮುಖ ಪಾತ್ರ - ಪ್ರಧಾನಿ ನರೇಂದ್ರ ಮೋದಿ
2. ಮುಂಬೈನಲ್ಲಿಂದು ವಿವಿಧ ಯೋಜನೆಗಳಿಗೆ ಚಾಲನೆ ನೀಡಲಿರುವ ಪ್ರಧಾನಿ; ನವಿಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟನೆ
3. ಎರಡು ದಿನಗಳ ಭೇಟಿಗಾಗಿ ಭಾರತಕ್ಕೆ ಆಗಮಿಸಿದ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್
4. ಅಯೋಧ್ಯೆಯಲ್ಲಿಂದು ಐತಿಹಾಸಿಕ ಬೃಹಸ್ಪತಿ ಕುಂಡ ಉದ್ಘಾಟಿಸಲಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್
5. ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್; ಕೊಲೊಂಬೋದಲ್ಲಿಂದು ಆಸ್ಟ್ರೇಲಿಯಾ ಪಾಕಿಸ್ತಾನ ಮುಖಾಮುಖಿ

***************

ಏಷ್ಯಾದ ಅತಿದೊಡ್ಡ ದೂರಸಂಪರ್ಕ, ಮಾಧ್ಯಮ ಮತ್ತು ತಂತ್ರಜ್ಞಾನ ಸಮಾವೇಶವಾದ ಇಂಡಿಯಾ ಮೊಬೈಲ್ ಕಾಂಗ್ರೆಸ್ ೨೦೨೫ರ ೯ನೇ ಆವೃತ್ತಿಯನ್ನು ಪ್ರಧಾನಿ ನರೇಂದ್ರ ಮೋದಿ, ನವದೆಹಲಿಯಲ್ಲಿ ಇಂದು ಉದ್ಘಾಟಿಸಿದರು. ನಾಲ್ಕು ದಿನಗಳ ಈ ಕಾರ್ಯಕ್ರಮ ದೂರಸಂಪರ್ಕ ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿನ ಇತ್ತೀಚಿನ ಪ್ರಗತಿಯನ್ನು ಪ್ರದರ್ಶಿಸುವ ಜೊತೆಗೆ ಜಾಗತಿಕ ನಾಯಕರು, ನೀತಿ ನಿರೂಪಕರು, ಉದ್ಯಮ ತಜ್ಞರು ಮತ್ತು ನಾವೀನ್ಯತಾಕಾರರನ್ನು ಒಂದೇ ವೇದಿಕೆಯಡಿ ಒಟ್ಟುಗೂಡಿಸುತ್ತದೆ. ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ,

ದೂರಸಂಪರ್ಕ ವಲಯದಲ್ಲಿ ಭಾರತ ಸಾಧಿಸಿರುವ ಪ್ರಗತಿ ಆತ್ಮನಿರ್ಭರ್ ಭಾರತ್ ದೃಷ್ಟಿಕೋನದ ಸಾಮರ್ಥ್ಯದ ಪ್ರತಿಬಿಂಬವಾಗಿದೆ. ೨-ಜಿ ತಂತ್ರಜ್ಞಾನ ಅಳವಡಿಕೆಯೇ ಪ್ರಯಾಸಕರವಾಗಿದ್ದ ಭಾರತದಲ್ಲಿ ಇಂದು ಬಹುತೇಕ ಎಲ್ಲಾ ಜಿಲ್ಲೆಗಳಿಗೆ ೫-ಜಿ ತಂತ್ರಜ್ಞಾನ ತಲುಪಿದೆ. ವಿದ್ಯುನ್ಮಾನ ಉತ್ಪಾದನೆ ೨೦೧೪ಕ್ಕೆ ಹೋಲಿಸಿದರೆ ೬ ಪಟ್ಟು ಹೆಚ್ಚಾಗಿದೆ. ಮೊಬೈಲ್ ಉತ್ಪಾದನೆಯಲ್ಲೂ ೨೮ ಪಟ್ಟು ವೃದ್ಧಿ ದಾಖಲಾಗಿದೆ ಎಂದರು. ಇತ್ತೀಚೆಗೆ ಭಾರತದಲ್ಲಿ ನಿರ್ಮಿತ ೪-ಜಿ ಸ್ಟ್ಯಾಕ್ ಅನ್ನು ಬಿಡುಗಡೆ ಮಾಡಲಾಗಿದ್ದು, ಆ ಮೂಲಕ ಭಾರತ ಈ ಸಾಮರ್ಥ್ಯವಿರುವ ಜಗತ್ತಿನ ಕೇವಲ ೫ ರಾಷ್ಟ್ರಗಳಲ್ಲಿ ಒಂದೆನಿಸಿದೆ. ೪-ಜಿ ಸ್ಟ್ಯಾಕ್ ನ ಮತ್ತೊಂದು ವಿಶೇಷತೆ ಎಂದರೆ ಅದರ ರಫ್ತು ಸಿದ್ಧತೆ. ಈ ದೇಶಿಯ ತಂತ್ರಜ್ಞಾನ ವ್ಯವಸ್ಥೆ ೨೦೩೦ರ ಇಂಡಿಯಾ ೬-ಜಿದೃಷ್ಟಿಕೋನವನ್ನು ಸಾಕಾರಗೊಳಿಸಲು ಸಹಕರಿಸಲಿದೆ ಎಂದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ, ( ೩೧ ಸೆಕೆಂಡುಗಳು)

ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಸಂವಹನ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ, ಪ್ರಜಾಪ್ರಭುತ್ವ, ಡಿಜಿಟಲ್ ಮೊದಲು ಮತ್ತು ವಿತರಣೆ ಎಂಬ ೪ ಅಂಶಗಳ ಮೇಲೆ ದೇಶದ ದೂರಸಂಪರ್ಕ ಕ್ರಾಂತಿ ನಿಂತಿದೆ. ೨೦೧೪ ರಲ್ಲಿ ೬೦ ದಶಲಕ್ಷ ಅಂತರ್ಜಾಲ ಬ್ರಾಡ್ ಬ್ರಾಂಡ್ ಬಳಕೆದಾರರಿಂದ ೯೪೪ ದಶಲಕ್ಷ ಬ್ರಾಡ್‌ಬ್ಯಾಂಡ್ ಚಂದಾದಾರರೊಂದಿಗೆ ಅಭೂತ ಪೂರ್ಣ ಬೆಳವಣಿಗೆಗೆ ದೇಶ ಸಾಕ್ಷಿಯಾಗಿದೆ. ದೇಶದ ಶೇಕಡಾ ೯೯.೯ ಜಿಲ್ಲೆಗಳು ಈಗ ೫-ಜಿ ಸಂಪರ್ಕ ಹೊಂದಿದೆ ಎಂದರು. ಜಗತ್ತಿನ ೨೦ ರಾಷ್ಟ್ರಗಳು ದೇಶದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮಾದರಿಯನ್ನು ಅಳವಡಿಸಿಕೊಳ್ಳಲು ಚರ್ಚೆ ನಡೆಸುತ್ತಿವೆ. ವಿಶ್ವದ ಒಟ್ಟು ಮೊಬೈಲ್ ಬಳಕೆದಾರರಲ್ಲಿ ಶೇಕಡಾ ೨೦ ರಷ್ಟು ಪಾಲನ್ನು ಭಾರತ ಹೊಂದಿದೆ. ಅಪ್ಟಿಕಲ್ ಸಂವಹನ, ದೂರಸಂಪರ್ಕದಲ್ಲಿ ಸೆಮಿಕಂಡ್ಕರ್‌ಗಳು, ಕ್ವಾಂಟಮ್ ಸಂವಹನ ಮತ್ತು ೬-ಜಿ ತಂತ್ರಜ್ಞಾನ ಈ ಸಮಾವೇಶದ ಪ್ರಮುಖ ವಿಷಯಗಳಾಗಿವೆ. 'ಪರಿವರ್ತನೆಗಾಗಿ ನಾವೀನ್ಯತೆ' ಎಂಬುದು ಈ ಕಾರ್ಯಕ್ರಮದ ಧ್ಯೇಯವಾಕ್ಯವಾಗಿದೆ.

***************

ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಎರಡು ದಿನಗಳ ಕಾಲ ಮಹಾರಾಷ್ಟ್ರಕ್ಕೆ ಭೇಟಿ ನೀಡಲಿದ್ದಾರೆ. ಈ ಸಮಯದಲ್ಲಿ ಅವರು, ೧೯ ಸಾವಿರದ ೬೫೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ನವಿ ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಉದ್ಘಾಟಿಸಲಿದ್ದಾರೆ. ಈ ವಿಮಾನ ನಿಲ್ದಾಣವನ್ನು ವಾರ್ಷಿಕವಾಗಿ ೯೦ ದಶಲಕ್ಷ ಪ್ರಯಾಣಿಕರನ್ನು ಹಾಗೂ ಮೂರು ದಶಲಕ್ಷ ಮೆಟ್ರಿಕ್‌ಟನ್ ಸರಕು ನಿರ್ವಹಿಸುವ ಸಾಮರ್ಥ್ಯದೊಂದಿಗೆ ವಿನ್ಯಾಸಗೊಳಿಸಲಾಗಿದೆ. ಭೇಟಿಯ ಭಾಗವಾಗಿ ಪ್ರಧಾನಿ ಮುಂಬೈ ಮೆಟ್ರೋ ೩ನೇ ಮಾರ್ಗದ ೨ಬಿ ಹಂತವನ್ನು ಉದ್ಘಾಟಿಸಲಿದ್ದು, ೩೭ ಸಾವಿರದ ೨೭೦ ಕೋಟಿ ರೂಪಾಯಿ ಒಟ್ಟು ವೆಚ್ಚದಲ್ಲಿ ನಿರ್ಮಿಸಲಾಗಿರುವ ಒಟ್ಟಾರೆ ಮುಂಬೈ ಮೆಟ್ರೋ ೩ನೇ ಮಾರ್ಗವನ್ನು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಇದರ ಜೊತೆಗೆ ೧೧ ಸರ್ಕಾರಿ ಸಾರಿಗೆ ನಿರ್ವಹಕರಿಗಾಗಿ ದೇಶದ ಮೊದಲ ಸಂಯೋಜಿತ ಸಾಮಾನ್ಯ ಸಂಚಾರ ಆಪ್ ಮುಂಬೈ-ಒನ್ ಅನ್ನು ಕೂಡ ಬಿಡುಗಡೆ ಮಾಡಲಿದ್ದಾರೆ ಹಾಗೂ ಸೀಮಿತ ಅವಧಿಯ ಉದ್ಯೋಗಾರ್ಹತಾ ಯೋಜನೆಗೂ ಚಾಲನೆ ನೀಡಲಿದ್ದಾರೆ. ನಾಳೆ, ಪ್ರಧಾನಿ ನರೇಂದ್ರ ಮೋದಿ, ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರಿಗೆ ಮುಂಬೈನಲ್ಲಿ ಆತಿಥ್ಯ ನೀಡಲಿದ್ದಾರೆ. ಈ ವೇಳೆ ಉಭಯ ನಾಯಕರು 'ವಿಷನ್-೨೦೩೫'ರ ವಿವಿಧ ಅಂಶಗಳಾದ್ಯಂತ ಭಾರತ-ಬ್ರಿಟನ್ ಸಮಗ್ರ ಕಾರ್ಯತಂತ್ರ ಪಾಲುದಾರಿಕೆಯ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿಯ ಪರಿಶೀಲನೆ ನಡೆಸಲಿದ್ದಾರೆ. ಪ್ರಧಾನಿ ಮೋದಿ ಮತ್ತು ಪ್ರಧಾನಿ ಸ್ಟಾರ್ಮರ್ ಮುಂಬೈನಲ್ಲಿ ನಡೆಯಲಿರುವ ೬ ನೇ ಜಾಗತಿಕ ಫಿನ್‌ಟೆಕ್ ಉತ್ಸವದಲ್ಲಿ ಭಾಗವಹಿಸಲಿದ್ದಾರೆ.

***************

ಇಂದಿನಿಂದ ಎರಡು ದಿನಗಳ ಭಾರತ ಭೇಟಿ ಕೈಗೊಂಡಿರುವ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್, ಇಂದು ಬೆಳಿಗ್ಗೆ ಮುಂಬೈಗೆ ಆಗಮಿಸಿದ್ದಾರೆ. ಬ್ರಿಟನ್ ಪ್ರಧಾನ ಮಂತ್ರಿಯಾಗಿ ೨೦೨೪ರಲ್ಲಿ ಅಧಿಕಾರ ವಹಿಸಿಕೊಂಡ ನಂತರ ಅವರು, ಕೈಗೊಂಡಿರುವ ಮೊದಲ ಅಧಿಕೃತ ಭಾರತ ಭೇಟಿ ಇದಾಗಿದೆ. ಛತ್ರಪತಿ ಶಿವಾಜಿ ಮಹಾರಾಜ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರನ್ನು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್, ಉಪಮುಖ್ಯಮಂತ್ರಿಗಳಾದ ಏಕನಾಥ್ ಶಿಂಧೆ ಮತ್ತು ಅಜಿತ್ ಪವರ್ ಹಾಗೂ ರಾಜ್ಯಪಾಲ ಆಚಾರ್ಯ ದೇವವ್ರತ್

ಬರಮಾಡಿಕೊಂಡರು. ಪ್ರಧಾನಿ ಸ್ಟಾರ್ಮರ್ ಇಂದು ನವೀ ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

***************

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇಂದು ಅಯೋಧ್ಯೆಯ ತೀಡಿ ಬಜಾರ್ ಬಳಿ ಪುನರ್‌ನಿರ್ಮಿತ ಐತಿಹಾಸಿಕ "ಬೃಹಸ್ಪತಿ ಕುಂಡ"ವನ್ನು ಉದ್ಘಾಟಿಸಲಿದ್ದಾರೆ. ದಕ್ಷಿಣ ಭಾರತದ ಭಕ್ತರಿಗೆ ಸಮರ್ಪಿತವಾಗಿರುವ ಈ ಕುಂಡದ ಉದ್ಘಾಟನಾ ಸಮಾರಂಭದಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕೂಡ ಉಪಸ್ಥಿತರಿರಲಿದ್ದಾರೆ.ಕೇಂದ್ರ ಹಣಕಾಸು ಸಚಿವೆ ಇಂದು ಮಧ್ಯಾಹ್ನ ಅಯೋಧ್ಯೆಗೆ ಆಗಮಿಸಿ, ನಾಳೆ ಬೆಳಿಗ್ಗೆ ಶ್ರೀರಾಮ ಮಂದಿರಕ್ಕೂ ಭೇಟಿ ನೀಡಿ ದೇವರ ದರ್ಶನ ಪಡೆಯಲಿದ್ದಾರೆ.ವೇದಗಳು, ಪುರಾಣಗಳು ಮತ್ತು ಉಪನಿಷತ್ತುಗಳಲ್ಲಿ ಉಲ್ಲೇಖವಿರುವ ಅಯೋಧ್ಯೆಯ ೧೦೮ ಪವಿತ್ರ ಕುಂಡಗಳಲ್ಲಿ ಒಂದಾದ ಈ ಪ್ರಾಚೀನ ಬೃಹಸ್ಪತಿ ಕುಂಡವನ್ನು ಸಂಪೂರ್ಣವಾಗಿ ನವೀಕರಿಸಲಾಗಿದೆ. ಸುಮಾರು ೪.೪೯ ಕೋಟಿ ರೂಪಾಯಿ ವೆಚ್ಚದಲ್ಲಿ ಈ ಯೋಜನೆ ಕೇವಲ ಒಂದೂವರೆ ತಿಂಗಳಲ್ಲಿ ಪೂರ್ಣಗೊಂಡಿದೆ.

***************

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ-ಎನ್‌ಟಿಎ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ರಾಷ್ಟ್ರೀಯ ಅರ್ಹತಾ ಪರೀಕ್ಷೆ, ಯುಜಿಸಿ-ನೆಟ್ ಡಿಸೆಂಬರ್-೨೦೨೫ ಕ್ಕೆ ನೋಂದಣಿ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಆಸಕ್ತ ಅಭ್ಯರ್ಥಿಗಳು ಅಧಿಕೃತ ಜಾಲತಾಣದಲ್ಲಿ ಲಭ್ಯವಿರುವ ಲಿಂಕ್ ಮೂಲಕ ರಾಷ್ಟ್ರೀಯ ಅರ್ಹತಾ ಪರೀಕ್ಷೆಗೆ ಅರ್ಜಿ ಸಲ್ಲಿಸಬಹುದು. ಯುಜಿಸಿ ಅಧಿಸೂಚನೆಯ ಪ್ರಕಾರ, ನೋಂದಣಿ ಪ್ರಕ್ರಿಯೆಯು ನವೆಂಬರ್ ೭ ರವರೆಗೆ ತೆರೆದಿರುತ್ತದೆ. ತಿದ್ದುಪಡಿಗಾಗಿ ನವೆಂಬರ್ ೧೦ ರಿಂದ ನವೆಂಬರ್ ೧೨ ರವರೆಗೆ ಅವಕಾಶವಿರುತ್ತದೆ. ಅರ್ಹ ಅಭ್ಯರ್ಥಿಗಳಿಗೆ 'ಜೂನಿಯರ್ ರಿಸರ್ಚ್ ಫೆಲೋಶಿಪ್' ನೀಡಲು ಮತ್ತು 'ಸಹಾಯಕ ಪ್ರಾಧ್ಯಾಪಕ' ಹುದ್ದೆಗೆ ಮತ್ತು ೮೫ ವಿಷಯಗಳಲ್ಲಿ ಪಿಎಚ್‌ಡಿ ಪ್ರವೇಶಕ್ಕಾಗಿ ಪರೀಕ್ಷೆಯನ್ನು ನಡೆಸಲಾಗುತ್ತದೆ.

***************

ದೇಶಾದ್ಯಂತ ಇಂದು ೯೩ನೇ ಭಾರತೀಯ ವಾಯುಪಡೆ ದಿನವನ್ನು ಆಚರಿಸಲಾಗುತ್ತಿದೆ.೧೯೩೨ರ ಈ ದಿನ ದೇಶದ ಹೆಮ್ಮೆಯ ಭಾರತೀಯ ವಾಯುಪಡೆ ಸ್ಥಾಪನೆಗೊಂಡ ಸ್ಮರಣಾರ್ಥ ಈ ದಿನವನ್ನು ಭಾರತೀಯ ವಾಯುಪಡೆ ದಿನವಾಗಿ ಆಚರಿಸಲಾಗುತ್ತದೆ. ಈ ದಿನದ ಅಂಗವಾಗಿ ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ಸೇನಾಪಡೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ, ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ಅಮರ್‌ಪ್ರೀತ್‌ಸಿಂಗ್  ನವದೆಹಲಿಯ ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಹುತಾತ್ಮ ವೀರಯೋಧರಿಗೆ ಗೌರವ ನಮನ ಸಲ್ಲಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಭಾರತೀಯ ವಾಯುಪಡೆ ದಿನದ ಶುಭಾಶಯ ಕೋರಿದ್ದಾರೆ.

***************

ಶಬರಿಮಲೆ ಚಿನ್ನದ ಹಗರಣದ ಬಗ್ಗೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್  ಇದೇ ಮೊದಲ ಬಾರಿಗೆ ಮೌನ ಮುರಿದಿದ್ದಾರೆ.  ತಪ್ಪಿತಸ್ಥರನ್ನು ರಕ್ಷಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ಇದೇ ವೇಳೆ ದೇವಾಲಯದ ವಸ್ತುಗಳನ್ನು  ಚೆನ್ನೈಗೆ ಸಾಗಿಸಲು ಅನುಮತಿ ನೀಡಿಲ್ಲ ಎಂದು ದೇವಾಲಯದ ತಂತ್ರಿ ಕಂದರರು ರಾಜೀವ್ ತಿಳಿಸಿದ್ದಾರೆ.

***************

ಭಾರತಕ್ಕೆ ಅಮೆರಿಕಾದ ಹೊಸರಾಯಭಾರಿಯಾಗಿ ಸೆರ್ಗಿಯೋ ಗಾರ್ ಅವರನ್ನು ನೇಮಕ ಮಾಡಲಾಗಿದೆ. ಅಮೆರಿಕಾದ ಸಂಸತ್ತು ನಿನ್ನೆ ೧೦೭ ನಾಮ ನಿರ್ದೇಶನಗಳನ್ನು ಅಂಗೀಕರಿಸಿದ್ದು ಅವರಲ್ಲಿ ಸೆರ್ಗಿಯೋಗಾರ್ ಅವರನ್ನು ಭಾರತಕ್ಕೆ ಅಮೆರಿಕಾದ ಹೊಸರಾಯಭಾರಿಯಾಗಿ ನೇಮಕ ಮಾಡಿದೆ.

***************

ಕೊಲೊಂಬೊದಲ್ಲಿ ನಡೆಯಲಿರುವ ಐಸಿಸಿ ಮಹಿಳಾ ವಿಶ್ವಕಪ್ ಏಕದಿನ ಕ್ರಿಕೆಟ್ ಪಂದ್ಯದಲ್ಲಿಂದು ಆಸ್ಟ್ರೇಲಿಯಾ ಹಾಗೂ ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ

ಕಾಲಮಾನ ಮಧ್ಯಾಹ್ನ  ಮೂರುಗಂಟೆಗೆ ಆರಂಭವಾಗಲಿದೆ. ನಿನ್ನೆ ಬಾಂಗ್ಲಾ ದೇಶ ತಂಡವನ್ನು ಮಣಿಸಿರುವ ಇಂಗ್ಲೆಂಡ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

********END*******